**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಗಳು ಹುಕ್ಕೇರಿ**

CC No.  942  /2024
CW-  7 / PW-4

ಹೆಸರು : ರಮೇಶ ಭರಮಪ್ಪ ಕಲ್ಲೋಳಿ
ವಯಸ್ಸು : 46ವರ್ಷ
ಉದ್ಯೋಗ : ಸಿ ಎಚ್ ಸಿ ನಂ. 1652 , ಯಮಕನಮರಡಿ ಪೋಲಿಸ ಠಾಣೆ
ವಾಸಸ್ಥಳ : ಯಮಕನಮರಡಿ

(ದಿನಾಂಕ 12-08-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಖ್ಯ ವಿಚಾರಣೆ : ಸಹಾಯಕ ಸರಕಾರಿ ಅಭಿಯೋಜಕರಿಂದ ಸರಕಾರದ ಪರವಾಗಿ  -**

**1.** ದಿನಾಂಕ **11-07-2023** ರಿಂದ ಇಲ್ಲಿಯವರೆಗೆ ನಾನು ಯಮಕನಮರಡಿ ಪೊಲೀಸ್ ಠಾಣೆ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

**2.** ದಿನಾಂಕ **13-02-2024** ರಂದು ನಾನು ಠಾಣೆಯಲ್ಲಿದ್ದಾಗ **4.00** ಗಂಟೆಗೆ ಭೀಮ್ಸ ಆಸ್ಪತ್ರೆ ಬೆಳಗಾವಿಯಿಂದ ಎಂ ಎಲ್ ಸಿ ಬಂತು. ನಾನು ನಮ್ಮ ಡಿಓ ಸಿಬ್ಬಂದಿಗೆ ಕರೆದುಕೊಂಡು ಆಸ್ಪತ್ರೆಗೆ ಹೋದೆ. ನಾನು ವೈದಾಧಿಕಾರಿಗಳಿಗೆ ಗಾಯಾಳುವಿನ ಹೇಳಿಕೆ ಪಡೆದುಕೊಳ್ಳಲು ಆತ ಸ್ಥಿತಿಯಲ್ಲಿದ್ದಾನೋ ಇಲ್ಲವೋ ಎಂಬ ಬಗ್ಗೆ ಪತ್ರ ಕೊಟ್ಟೆ . ಅಲ್ಲಿ ಚಾಸಾ-**1** ಕಮಲವ್ವ ಗಂಡ್ರೊಳ್ಳಿ ಆಸ್ಪತ್ರೆಯಲ್ಲಿ ದಾಖಲ ಆಗಿದ್ದರು.  ವೈದ್ಯರು ಅವರು ಹೇಳಿಕೆ ಕೊಡವ ಸ್ಥಿತಿಯಲ್ಲಿರುವುದನ್ನು ಖಾತ್ರಿ ಮಾಡಿಕೊಂಡು ವೈದ್ಯರ ಲಿಖಿತ ಅನುಮತಿ ಪಡೆದು ಚಾಸಾ-**1** ಇವರನ್ನು ವಿಚಾರ ಮಾಡಿ ಅವರ ಹೇಳಿಕೆಯನ್ನು ಪಡೆದೆ.  ನಂತರ ಚಾಸಾ-**1** ರವರನ್ನು ವಿಚಾರಣೆ ಮಾಡಿದಾಗ ಆಕೆಗೆ ಬರೆಯಲು ಬರುವುದಿಲ್ಲ ಎಂದು ಹೇಳಿದರು. ತಾನು ಕಂಪ್ಲೆಂಟ ಕೊಡುತ್ತೇನೆ , ಬರೆದುಕೊಳ್ಳೇಬೆಕು ಎಂದು ಆಕೆ ಹೇಳಿದಳು. ಆ ಪ್ರಕಾರ ನಾನು ಆಕೆ ಕೊಟ್ಟಂತಹ ಕಂಪ್ಲೆಂಟನ್ನು  ನಮ್ಮ ಡಿಓ ಸಿಬ್ಬಂದಿ ಬರೆದರು.

**3.** ನಂತರ ಅವರ ಬಳಿ **18-30** ಕ್ಕೆ ಕಂಪ್ಲೆಂಟ ತೆಗೆದುಕೊಂಡೆವು.  ವಾಪಸ ಠಾಣಗೆ ಬಂದೆವು. ನಂತರ ಠಾಣಾ ಗುನ್ನಾ ನಂ. **21/2024** ರಂತೆ **20.15** ಕ್ಕೆ ಪ್ರಕರಣ ದಾಖಲ ಮಾಡಿದೆವು.  ನಂತರ ಪಿಸಿ-**3795** ಇವರ ಮುಖಾಂತರ ಎಫ್ ಐ ಆರ್ ನ್ನು ನ್ಯಾಯಾಲಯಕ್ಕೆ ಕಳುಹಿಸಿದೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದುಅ ದನನ್ನು

ಈಗಾಗಲೇ ನಿ.ಪಿ-1 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿ.ಪಿ-1ಬಿ ಎಂದು ಗುರುತಿಸಲಾಯಿತು. ಅಂದು ದಾಖಲಿಸಿದ ಎಫ್.ಐ.ಆರ್. ಅನ್ನು ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಎಫ್.ಐ.ಆರ್. ಅನ್ನು ನಿ-ಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-5ಎ ಎಂದು ಗುರುತಿಸಲಾಯಿತು. ದಿನಾಂಕ 14-02-2024 ರಂದು ಅಪರಾಧ ಸ್ಥಳದ ಪಂಚನಾಮೆ ಕುರಿತು ಪಂಚರಿಗೆ ನೋಟೀಸ್ ನೀಡಿದೆ. ಸದರಿ ನೋಟಿಸನ್ನು ಸಾಕ್ಷಿ ನೋಡಿ ಒಪ್ಪಿ ದ್ದರಿಂದ ಅದನ್ನು ನಿ-ಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-6ಎ ಎಂದು ಗುರುತಿಸಲಾಯಿತು. ದೂರು ದಾಖಲಿಸುವ ಪೂರ್ವದಲ್ಲಿ ವೈದ್ಯರ ನೀಡಿದ ಅನುಮತಿ ಪತ್ರವನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿ-ಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-7ಎ ಎಂದು ಗುರುತಿಸಲಾಯಿತು.

4. ಪಂಚರಾದ ಅಶೋಕ ಮತ್ತು ವಿನಾಯಕ ಇವರ ಸಮಕ್ಷಮ ಘಟನಾ ಸ್ಥಳವಾದ ಯರಗಟ್ಟಿ ಗ್ರಾಮದಲ್ಲಿರುವ ಬಡಕುಂದ್ರಿ ಹೊಸೂರ ರಸ್ತೆಯಿಂದ ಗಂಡ್ರೋಳಿಳ್ಳ ತೋಟದ ಕಡೆಗೆ ಇರುವ ರಸ್ತೆಯ ಪೂರ್ವ ದಂಡೆಯಲ್ಲಿನ ಫಿರ್ಯಾದಿಯ ಮನೆಯ ಮುಂದೆ ಖುಲ್ಲಾ ಜಾಗ ಇದ್ದು ಅಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿ ಕಚ್ಚಾ ನಕಾಶೆ ಬರೆದು ಫೋಟೊ ತೆಗೆದಿರುತ್ತೇನೆ. ಹಾಗೂ ಅಲ್ಲಿ ಪಂಚರ ಸಮಕ್ಷಮ ಒಂದು ಸಣ್ಣ ಕಲ್ಲು ಮತ್ತ ಒಂದು ದಪ್ಪ ಬಿದಿರು ಬಡಿಗೆಯನ್ನು ಜಪ್ತ ಮಾಡಿಕೊಂಡಿರುತೆತೇನೆ. ಅದನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ಈಗಾಗಲೇ ಮುಮಾ-1 ಮತ್ತು 2 ಎಂದು ಗುರುತಿಸಲಾಗಿದೆ. ಪಂಚನಾಮೆಯನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ಈಗಾಗಲೇ ನಿ-ಪಿ-2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿ.ಪಿ-2ಸಿ ಎಂದು ಗುರುತಿಸಲಾಯಿತು. ಫೋಟೊವನ್ನು ಈಗಾಗಲೇ ನಿ-ಪಿ-3 ಮತ್ತು 4 ಎಂದು ಗುರುತಿಸಲಾಗಿದೆ.

5. ಚಾಸಾ-1 ಇವರ ಗಂಡನನ್ನು ವಿಚಾರಣೆ ಮಾಡಿದೆವು. ಅಲ್ಲಿ ಘಟನೆಯನ್ನು ಪ್ರತ್ಯಕ್ಷವಾಗಿ ನೋಡಿದಂತಹ ಚಾಸಾ-4 ಈರಪ್ಪ ಇವರ ಹೇಳಿಕೆಯನ್ನು ಠಾಣೆಗೆ ಕರೆಸಿ ಟೈಪ ಮಾಡಿಸಿದೆ. ಆರೋಪಿಯ ಹೆಸರು ತಪ್ಪಾಗಿತ್ತು. ಆರೋಪಿತನ ಆಧಾರ ಕಾರ್ಡ ಚೆಕ್ ಮಾಡಿದಾಗ ಗೊತ್ತಾಯಿತು. ನಂತರ ಚಾಸಾ-1 ಇವರ ಪುನಃ ಹೇಳಿಕೆ ಪಡೆದುಕೊಂಡೆ. ನಂತರ ಪಂಚರಿಗೆ ಮತ್ತು ಪ್ರತ್ಯಕ್ಷ ದರ್ಶಿಗೆ ಸಾಕ್ಷಿ ನುಡಿಯಲು ನೋಟಿಸನ್ನು ನೀಡಿರುತ್ತೇನೆ.

ಸದರಿ ನೋಟಿಸನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿ-ಪಿ-8 ಮತ್ತು 9 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-8ಎ ಮತ್ತು 9ಎ ಎಂದು ಗುರುತಿಸಲಾಯಿತು. ಜಪ್ತಿ ಪಡಿಸಿಕೊಂಡಂತಹ ಮುದ್ದೆಮಾಲನ್ನು ಪಿಎಫ್ ಗೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತೆತೇನೆ. ಪಿಎಫ್ ನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿ-ಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-10ಎ ಎಂದು ಗುರುತಿಸಲಾಯಿತು. ಹೊಲದ ಸಂಬಂಧ ಜಗಳ ಆಗಿದ್ದನ್ನು ತಿಳಿದುಕೊಂಡು ಆ ಹೊಲದ ಉತಾರನ್ನು ಚಾಸಾ-1 ರವರಿಂದ ಪಡೆದಿರುತ್ತೇನೆ. ಅದನ್ನು ನಿ-ಪಿ-11 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-11ಎ ಎಂದು ಗುರುತಿಸಲಾಯಿತು. ಚಾಸಾ-1 ಮತ್ತು ಉಳಿದ ಸಾಕ್ಷಿದಾರರ ಆಧಾರ ಕಾರ್ಡನ್ನು ಪಡೆದಿರುತ್ತೇನೆ. ಅದೇ ದಿನ ದಿನಾಂಕ 14-2-2024 ರಂದು ಸಾಯಂಕಾಲ 5-00 ಗಂಟೆಗೆ ಆರೋಪಿ ರಾಜು ಗಂಡ್ರೋಳ್ಳಿ ಮತ್ತು ಶೋಭಾ ಗಂಡ್ರೊಳ್ಳಿ ಇವರನ್ನು ಯರಗಟ್ಟಿಯಲ್ಲಿ ದಸ್ತಗೀರ ಮಾಡಿರುತ್ತೇನೆ. ಅವರನ್ನು ಠಾಣೆಗೆ ಕರೆದುಕೊಂಡು ಬಂದೆ. ಠಾಣೆಯಲ್ಲಿ ದಸ್ತಗೀರ ನಿಯಮಾವಳಿ ಪಾಲಿಸಿ ಅವರನ್ನು ಜ್ಯಾಮೀನ ಮೇಲೆ ಬಿಡುಗಡೆ ಮಾಡಿದೆ.

6. ಬೀಮ್ಸ ಆಸ್ಪತ್ರೆಯಿಂದ ದಿನಾಂಕ 15-3-2024 ರಂದು ಕಮಲವ್ವ ಗಂಡ್ರೋಳ್ಳಿ ಇವರ ಗಾಯದ ಪ್ರಮಾಣ ಪತ್ರವನ್ನು ಪಡೆದಿದ್ದು ಅದನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿ-ಪಿ-12 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-12ಎ ಎಂದು ಗುರುತಿಯಸಲಾಯಿತು. ಯಮಕನಮರಡಿ ಸರಕಾರಿ ಆಸ್ಪತ್ರೆಯಿಂದ ದಿನಾಂಕ 22-3-2024 ರಂದು ಕಮಲವ್ವ ಗಂಡ್ರೋಳ್ಳಿ ಇವರ ಗಾಯದ ಪ್ರಮಾಣ ಪತ್ರವನ್ನು ಪಡೆದಿದ್ದು ಅದನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿ-ಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ-13ಎ ಎಂದು ಗುರುತಿಸಲಾಯಿತು. ತನಿಖೆಯನ್ನು ಪೂರೈಸಿ ಆರೋಪಿತರ ವಿರುದ್ದ ಅಂತಿಮ ವರದಿ ಸಲ್ಲಿಸಿರುತ್ತೇನೆ. ಸ್ಥಳದಲ್ಲಿ ಫೋಟೊ ತೆಗೆದ ಬಗ್ಗೆ ಸಿಡಿ ಮತ್ತು 65ಬಿ ಸರ್ಟಿಫಿಕೇಟನ್ನು ಹಾಜರ ಮಾಡಿದ್ದು ಅವುಗಳನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅವುಗಳನ್ನು ನಿ-ಪಿ-14 ಮತ್ತು 15 ಎಂದು ಗುರುತಿಸಲಾಯಿತು. ಎಚ್ ಸಿ 1315 - ಬಿ ಕೆ ನಗಾರಿ ಇವರು ನಮ್ಮ ಡಿ ಓ ಸಿಬ್ಬಂದಿ ಆಗಿದ್ದು ಅವರು ಆ ಸರ್ಟಿಫಿಕೇಟನ್ನು ನೀಡಿರುತ್ತಾರೆ.

**ಪಾಟಿ ಸವಾಲುಃ ಆರೋಪಿ ಪರ ಕು. ಎನ್ ಕೆ ಹತ್ತರವಾಟ ವಕೀಲರಿಂದ -**

ಕಾಲಾವಕಾಶ ಕೋರಿದ್ದು ಮುಂದೂಡಲಾಯಿತು.

**ಮರುವಿಚಾರಣೆ ಇಲ್ಲ**

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ